Manchanabele Project

*Q.—427. Sri C. R. RANGE GOWDA (Magadi).—

Will the Minister for Public Works be pleased to state :—

(*a*) the stage at which the proposal for the construction of Manchanabele Project in Magadi Taluk stands at present ;

(*b*) when they intend taking this project ?

A.—Sri VEERENDRA PATIL (Minister for Public Works).—

(*a*) Project proposal is sent to Government of India for clearance.

(*b*) During the IV Plan period subject to availability of adequate funds.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನ ಮಂಚನಬೆಲೆ ಯೋಜನೆಯ ನಿರ್ಮಾಣಕ್ಕೆ ಅಂದಾಜು ಮಾಡಿರುವುದು ಎಷ್ಟು ? ಅಚ್ಚುಕಟ್ಟು ಎಷ್ಟು ? ಕೇಂದ್ರ ಸರಕಾರದ ಕ್ಲಿಯರನ್ಸ್‌ಗಾಗಿ ಕಳಿಸಿ ಕೊಟ್ಟಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದು ಫ್ಲಡ್ ಕಂಟ್ರೋಲ್ ಕಂ ಇರಿಗೇಷನ್ ಪ್ರಾಜೆಕ್ಟ್ ಇದೆ. ಇದರ ಅಂದಾಜು ಸುಮಾರು 3 ಕೋಟಿ 17 ಲಕ್ಷ. ಸುಮಾರು 7000 ಎಕರೆ ಜಮೀನು ರಾಮನಗರಂ ತಾಲ್ಲೂಕಿನಲ್ಲಿ ನೀರಾವರಿಯಾಗುತ್ತದೆ. 16—9—1966ರಲ್ಲಿ ಟೆಕ್ನಿಕಲ್ ಕ್ಲಿಯರೆನ್ಸ್ ಹಾಗು ಫೈನಾನ್ಸಿಯರ್ ಅಸಿಸ್ಟೆನ್ಸ್ ಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ಈ ಸ್ಥಳವನ್ನು ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲನೆ ಮಾಡಿದ್ದಾರೆ. ಈ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಕೇಂದ್ರದ ನೀರಾವರಿ ಮಂತ್ರಿಗಳು ಕೂಡ ಸ್ಥಳ ಪರಿಶೀಲನೆ ಮಾಡುತ್ತಾರೆಂದು ಪತ್ರಿಕೆಗಳಲ್ಲಿ ಓದಿದೆ. ಜಾಗ್ರತೆ ಈ ಕಾರ್ಯಕ್ರಮವನ್ನು ಕೈಕೊಂಡು ಮಾಗಡಿ ತಾಲ್ಲೂಕು ಮತ್ತು ರಾಮನಗರ ತಾಲ್ಲೂಕುಗಳಿಗೆ ಅನುಕೂಲ ಮಾಡಿ ಕೊಡುತ್ತೀರಾ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ನಾನು ಈ ಜಾಗವನ್ನು ನೋಡಿದ್ದೇನೆ. ಇದು ಅತಿ ಅವಶ್ಯಕವಾದುದು. ನೀರಾವರಿಗೆ ಎಷ್ಟು ಆವಶ್ಯಕತೆ ಇದೆಯೋ ಅಷ್ಟೇ ಹಾಳಾಗತಕ್ಕ ಪ್ರದೇಶವನ್ನು ತಪ್ಪಿಸುವುದೂ ಅವಶ್ಯಕವಾಗಿದೆ. ಇದನ್ನು ಸ್ಪೆಷಲ್ ಕೇಸಾಗಿ ಪರಿಗಣಿಸಿ ಸಹಾಯ ಮಾಡಬೇಕೆಂದು ಕೇಂದ್ರ ಸರಕಾರಕ್ಕೆ ಬರೆದಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೆಂಗಳೂರಿಗೆ ನೀರು ಒದಗಿಸುವ ಕಾವೇರಿ ಯೋಜನೆಯನ್ನು ತಕ್ಷಣ ತೆಗೆದುಕೊಳ್ಳುವುದಕ್ಕೆ ಕಷ್ಟವಿರುವುದರಿಂದ ಈ ನೀರನ್ನು ಬೆಂಗಳೂರಿಗೆ ಕುಡಿಯುವುದಕ್ಕೆ ಉಪಯೋಗಿಸತಕ್ಕ ಯೋಜನೆ ಹಿಂದೆ ಇತ್ತು. ಅದನ್ನು ಕೈಬಿಟ್ಟಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ಯೋಜನೆಯನ್ನು ಕೈಬಿಟ್ಟೇ ಕಾವೇರಿ ಯೋಜನೆಯನ್ನು ತೆಗೆದುಕೊಂಡು ಮುಂದೆ ಹೋಗುತ್ತಿರುವುದು. ಆರ್ಕಾವತಿ ನೀರನ್ನು ಬೆಂಗಳೂರಿಗೆ ತರತಕ್ಕ ಯೋಜನೆ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಜಾಗ್ರತೆ ಮಾಡಿಸುವುದಾಗಿ ಹೇಳಿದರು. 16—9—1961ರಲ್ಲಿ ಇದನ್ನು ಕೇಂದ್ರಕ್ಕೆ ಕಳಿಸಿದ್ದಾರೆ. ಆರು ವರ್ಷವಾದರೂ ಏಕೆ ಕಾರ್ಯಗತವಾಗಿಲ್ಲ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಸರಿಯಾಗಿ ಕೇಳಿಲ್ಲ ಅನ್ನಿಸುತ್ತದೆ. 16—9—1966ರಲ್ಲಿ ಕಳಿಸಿದ್ದೇವೆ. ಕೇಂದ್ರ ಸರ್ಕಾರದವರು ಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಇದಕ್ಕೆ ಉತ್ತರವಾಗಿ ಕೆ. ಎಲ್. ರಾವ್ ಅವರು ಪಾರ್ಲಿಮೆಂಟ್ ಮುಗಿದ ತಕ್ಷಣ ಬಂದು ಸ್ಥಳಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಸೋಲೂರು ಸಿದ್ಧಪ್ಪ.—ಕೆರೆ ಕಟ್ಟುತಕ್ಕ ಪ್ರದೇಶ ಮಾಗಡಿ ತಾಲ್ಲೂಕಿಗೆ ಸೇರಿದ್ದು, ಪ್ರಯೋಜನವಾಗತಕ್ಕುದು ರಾಮನಗರ ತಾಲ್ಲೂಕಿಗೆ ಮತ್ತು ಚನ್ನಪಟ್ಟಣ ತಾಲ್ಲೂಕಿಗೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀರ್.—ರಾಮನಗರ ತಾಲ್ಲೂಕಿನಲ್ಲಿ ಏಳು ಸಾವಿರ ಎಕರೆಗೆ ನೀರಾವರಿಯಾಗುತ್ತದೆ.

Scheduled Castes and Scheduled Tribes Housing Societies

*Q—450. Sri A. MUNIYAPPA (Bagepally).—

Will the Minister for Development and Co-operation be pleased to state :—

(*a*) the number of Scheduled Castes and Scheduled Tribes Housing Co-operative Societies registered in the State (Districtwise information may please be furnished) ;

(*b*) out of the above societies, the number of societies wherein the Taluk Board President is the President of the Society and also where the President of the Society is a Harijan ;

(*c*) the amount sanctioned during the last two years and the amount spent (Districtwise figures may please be furnished) ?

A.—Sri P. M. NADA GOUDA (Minister for Development and Co-operation).—

(*a*) *District*	*No. of Societies regd.*
Bangalore	30
Tumkur	11
Kolar	12
Shimoga	9
Chitradurga	9
Belgaum	26
Dharwar	50
Bijapur	41
Karwar	10
Gulbarga	15
Bellary	7
Raichur	9
Bidar	5
Mysore	16
Mandya	8
Hassan	8
Chickmagalur	7
Coorg	3
South Kanara	8
	284